[ Govt. of Karnataka C.R.P. 67]

| Deposition Sheets (RP.No.57) Form No.4 |
|---|

**IN THE COURT OF ADDL. CIVIL JUDGE & J.M.F.C., KUSHTAGI**

**Criminal Case No. 641/2017**

ಪಿ.ಡಬ್ಲ್ಯು : 4 ಸಿ.ಡಬ್ಲ್ಯು : 4

ಸಾಕ್ಷಿದಾರರ ಹೆಸರು : ಲಕ್ಷ್ಮವ್ವ
ಗಂಡನ ಹೆಸರು : ನಾಗಪ್ಪ ಕಠಾರಿ
ಪ್ರಾಯ : 42 ವರ್ಷ
ಉದ್ಯೋಗ : ಕೂಲಿಕೆಲಸ
ವಾಸ : ಕೂಡ್ಲೂರು

ದಿನಾಂಕ 13.09.2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-**

ಮೃತ ಶ್ಯಾಮಿದಾಬಿರವರ ಪರಿಚಯವಿಲ್ಲ.

ಈಗ ನನಗೆ ತೋರಿಸಿದ ನಿಪಿ-2 ರಲ್ಲಿರುವ ಸಹಿ ನನ್ನದು. ಸದರಿ ದಾಖಲೆಗೆ ಪೋಲಿಸರು ಸಹಿ ಮಾಡುವಂತೆ ಸೂಚಿಸಿದ ಮೇರೆಗೆ ಸಹಿ ಮಾಡಿರುತ್ತೇನೆ. ಸದರಿ ದಾಖಲೆಯು ಯಾವುದರ ಕುರಿತು ಮತ್ತು ಅದರಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೆ ಶವಮಹಜರನ್ನು ಜರುಗಿಸಿರುವುದಿಲ್ಲ. ನಿಪಿ-2 ರಲ್ಲಿನ ಸಾಕ್ಷ್ಯಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ರವರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು)

**ಪಾಟೀ ಸವಾಲು : ಸಹಾಯಕ ಸರ್ಕಾರಿ ಅಭಿಯೋಜಕರುಃ-**

ದಿನಾಂಕಃ13/12/2016 ರಂದು ತಾವರಗೇರಾ-ಮುದೇನೂರು ರಸ್ತೆಯಲ್ಲಿ ಸಂಭವಿಸಿದ ಅಪಘಾತದಲ್ಲಿ ಮೃತಪಟ್ಟ ಶ್ಯಾಮೀದಾಬಿ ರವರ ಶವಮಹಜರನ್ನು ಜರುಗಿಸುವ ಸಲುವಾಗಿ ನನ್ನನ್ನು ಪಂಚರರಾಗಿ ಕರೆದಿದ್ದರು ಎಂದರೆ ಸರಿಯಲ್ಲ. ನನ್ನ ಸಮಕ್ಷಮ ದಿನಾಂಕಃ13/12/2016 ರಂದು ರಾತ್ರಿ 8.30 ಗಂಟೆಯಿಂದ 10.15 ಗಂಟೆಯವರೆಗೆ ನನ್ನ ಸಮಕ್ಷಮ ಮೃತ ಶ್ಯಾಮೀದಾಬಿರವರ ಶವಮಹಜರನ್ನು ಜರುಗಿಸಿದ್ದರು ಎಂದರೆ ಸರಿಯಲ್ಲ. ನಾನು ಸದರಿ

ಶವಮಹಜರಿಗೆ ಪಂಚರಳಾಗಿ ನಿಪಿ-2(ಬಿ) ರಂತೆ ಸಹಿ ಮಾಡಿದ್ದೆ ಎಂದರೆ ಸರಿಯಲ್ಲ. ನಾನು ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು** : ಆರೋಪಿತರ ಪರ : ಶ್ರೀ ವಿ.ಕೆ.ಕೆ ವಕೀಲರಿಂದ : ಏನೂ ಇಲ್ಲ.

ಮರುವಿಚಾರಣೆ : ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ. ಕುಷ್ಟಗಿ